**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತಳವಾರ್ ಸಾಬಣ್ಣ ಇವರ ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ.**

**ವಿಷಯ:** ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್ ಡಿಬಿ) ಬಿಡುಗಡೆ ಮಾಡಿರುವ ಅನುದಾನದ ಅಪೂರ್ಣ ಬಳಕೆ, ಕಳಪೆ ಕಾಮಗಾರಿಗಳು, ಹಣಕಾಸಿನ ದುರ್ಬಳಕೆ ಮತ್ತು ಅವ್ಯವಹಾರ ಹಾಗೂ ಇವುಗಳ ನಿಯಂತ್ರಣ/ ತನಿಖೆ ಮಾಡಲು ಕೈಗೊಂಡಿರುವ ಕ್ರಮಗಳ ಕುರಿತು.

******

**ಉತ್ತರ:-**

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಸ್ಥಾಪನೆಯಾದಗಿನಿಂದ ಡಾ|| ಡಿ.ಎಂ ನಂಜುಂಡಪ್ಪ ವರದಿಯ ಆಧಾರದ ಮೇಲೆ ಹಾಗೂ ಸರ್ಕಾರದ ನಿರ್ದೇಶನದಂತೆ ಕಾರ್ಯ ನಿರ್ವಹಿಸುತ್ತಿದೆ. ಮಂಡಳಿಗೆ 2013-14ನೇ ಸಾಲಿನಿಂದ 2022-23ನೇ ಸಾಲಿನ ವರೆಗೆ ಸರ್ಕಾರದಿಂದ ನಿಗದಿಪಡಿಸಿದ, ಬಿಡುಗಡೆ ಮಾಡಿದ ಹಾಗೂ ವೆಚ್ಚ ಮಾಡಿದ ಅನುದಾನದ ವಿವರಗಳು ಈ ಕೆಳಗಿನಂತಿವೆ.

**2013-14 ನೇ ಸಾಲಿನಿಂದ 2022-23ನೇ ಸಾಲಿನವರೆಗೆ ವರ್ಷವಾರು ಆರ್ಥಿಕ ಪ್ರಗತಿ**

| ಕ್ರಮ ಸಂ | ವರ್ಷ | ಸರ್ಕಾರದಿಂದ ನಿಗದಿಪಡಿಸಿದ ಅನುದಾನ | ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ | ವೆಚ್ಚ (ಆರಂಭಿಕ ಶಿಲ್ಕು ಸೇರಿ) |
|---|---|---|---|---|
| 1 | 2 | 3 | 4 | 6 |
| 1 | 2013-14 | 153.50 | 78.97 | 26.66 |
| 2 | 2014-15 | 600.00 | 300.00 | 322.59 |
| 3 | 2015-16 | 1000.00 | 750.00 | 493.66 |
| 4 | 2016-17 | 1000.00 | 750.00 | 960.02 |
| 5 | 2017-18 | 1000.00 | 800.00 | 450.32 |
| 6 | 2018-19 | 1000.00 | 1000.00 | 1193.54 |
| 7 | 2019-20 | 1500.00 | 1125.00 | 1246.81 |
| 8 | 2020-21 | 1131.86 | 1031.86 | 925.81 |
| 9 | 2021-22 | 1492.97 | 1492.97 | 1129.66 |
| 10 | 2022-23 | 3000.00 | 2900.00 | 1584.30 |
| | **ಒಟ್ಟು** | **11878.33** | **10228.8** | **8333.37** |

2013-14ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಸರ್ಕಾರದಿಂದ ರೂ. 11878.33 ಕೋಟಿಗಳ ಅನುದಾನ ನಿಗದಿಪಸಿದ್ದು, ರೂ. 10228.80 ಕೋಟಿಗಳ ಅನುದಾನ ಮಂಡಳಿಗೆ ಬಿಡುಗಡ ಮಾಡಲಾಗಿರುತ್ತದೆ. ಈ ಪೈಕಿ ಒಟ್ಟು ರೂ. 8333.37 ಕೋಟಿಗಳ ಅನುದಾನ ವೆಚ್ಚ ಮಾಡಲಾಗಿದ.

2013-14ನೇ ಸಾಲಿನಿಂದ 2022-23 ನೇ ಸಾಲಿನ ವರಗೆ ಒಟ್ಟು 29246 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪೈಕಿ 24996 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 3186 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 1064 ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

2023-24ನೇ ಸಾಲಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕ್ರಿಯಾಯೋಜನೆ ರೂಪಿಸಲು ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆ ಪಡೆದು ದಿನಾಂಕ:28.11.2023ರಂದು ಆದೇಶ ಹೊರಡಿಸಲಾಗಿರುವುದರಿಂದ ಮಂಡಳಿಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು ಶೀಘ್ರದಲ್ಲೇ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುತ್ತದೆ.

ಮಂಡಳಿಯಿಂದ ಅನುಮೋದನೆಗೊಂಡ ಕಾಮಗಾರಿಗಳನ್ನು ವಿವಿಧ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಗಳನ್ನು 3ನೇ ತಪಾಸಣಾ ತಂಡದಿಂದ, ಇಂಜಿನಿಯರಿಂಗ್ ಕಾಲೇಜುಗಳಿಂದ, ಲೋಕೋಪಯೋಗಿ ಗುಣ ಭರವಸೆ ನಿಯಂತ್ರಣ ವಿಭಾಗ, ಪಂಚಾಯತ ರಾಜ್ ಇಂಜಿನಿಯರಿಂಗ್ ಗುಣ ಭರವಸೆ ನಿಯಂತ್ರಣ ವಿಭಾಗ, ಸಣ್ಣ ನೀರಾವರಿ ಗುಣ ಭರವಸೆ ನಿಯಂತ್ರಣ ವಿಭಾಗ ಇತ್ಯಾದಿ ಗುಣ ಭರವಸೆ ನಿಯಂತ್ರಣ ವಿಭಾಗಗಳಿಂದ ಕಾಮಗಾರಿಗಳ **ಗುಣಮಟ್ಟವನ್ನು ಪರಿಶೀಲಿಸಿ ದೃಢೀಕರಣ ವರದಿಗಳನ್ನು ಪಡೆಯಲಾಗುತ್ತಿದೆ**.

ಮಹಾಲೇಖಪಾಲರು ಲೆಕ್ಕ ಪರಿಶೋಧನೆ ಹಾಗೂ ಸ್ಥಳ ಪರಿಶೀಲನೆ ನಡೆಸಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಆರ್.ಎಚ್-05 ಕ್ಯಾಂಪ್ ನಲ್ಲಿ ಕೈಗೊಂಡಿರುವ ಅಂದಾಜು ಮೊತ್ತ ರೂ.**1.02**ವೆಚ್ಚದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯು ಕಳಪೆಯಾಗಿರುವ ಬಗ್ಗೆ ವರದಿ ಮಾಡಿದ್ದು, ಸದರಿ ವರದಿಯ ಕುರಿತು ಪರಿಶೀಲನೆ ಕೈಗೊಂಡಿದ್ದು, ಕಳಪೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವವರ ಬಗ್ಗೆ **AG** ವರದಿ ಆಧರಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಮಂಡಳಿಯು ಸದರಿ ಕಾಮಗಾರಿಗೆ ಪೂರ್ಣ ಹಣ ಪಾವತಿಸುವುದನ್ನು ತಡೆಹಿಡಿದು ನಿಯಮಾನುಸಾರ ಕ್ರಮ ಕೈಗೊಳ್ಳುವ ಪ್ರಕ್ರಿಯೆ ಪ್ರಾರಂಭಿಸಿರುತ್ತಾರೆ. ಅಲ್ಲದೆ ಕಲಬುರಗಿ ಉತ್ಸವಕ್ಕೆ ಮಂಡಳಿಯ ಅನುದಾನ ವೆಚ್ಚವಾಗಿರುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆ ನಡೆಸಿದ್ದು, ಸ್ವೀಕೃತ ವರದಿಯ ಮೇಲೆ ಕ್ರಮವಹಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ. ಮಂಡಳಿಯಲ್ಲಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸ್ವೀಕೃತವಾಗುವ ದೂರುಗಳನ್ನು ಪರಿಶೀಲಿಸಲು **ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ 02 "ದೂರು ನಿರ್ವಹಣಾ ಸಮಿತಿಗಳನ್ನು" ರಚಿಸಲಾಗಿದ್ದು, ಸದರಿ ಸಮಿತಿಯ ವಿವರ ಈ ಕೆಳಕಂಡಂತಿದೆ**.

| ಕ್ರಮ ಸಂ | ಅಧಿಕಾರಿಗಳ ವಿವರ | ಪದನಾಮ | ದೂರು ನಿರ್ವಹಿಸಬೇಕಾದ ಇಲಾಖೆಗಳ ವಿವರ |
|---|---|---|---|
| **1** | **2** | **3** | **4** |
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು | KRIDL, PRED, RWS & PMGSY |
| 2 | ಅಪರ ಜಿಲ್ಲಾಧಿಕಾರಿಗಳು | ಉಪಾಧ್ಯಕ್ಷರು | |
| 3 | ಇಇ ಲೋ.ಇ ಗುಣ ನಿಯಂತ್ರಣ ಭರವಸೆ ವಿಭಾಗ | ಸದಸ್ಯರು | |
| 4 | ಜಿಲ್ಲಾಧಿಕಾರಿಗಳು ರವರಿಂದ ನಾಮ ನಿರ್ದೇಶನಗೊಂಡ ತಾಂತ್ರಿಕ ತಜ್ಞರು | ಸದಸ್ಯರು | |
| 5 | ತಾಂತ್ರಿಕ ಸಲಹೆಗಾರರು ಜಿಲ್ಲಾಧಿಕಾರಿಗಳ ಕಾರ್ಯಲಯ (ಕೆ.ಕೆ.ಆರ್.ಡಿ.ಬಿ ಕೋಶ) | ಸದಸ್ಯರು ಕಾರ್ಯದರ್ಶಿಗಳು | |

| ಕ್ರಮ ಸಂ | ಅಧಿಕಾರಿಗಳ ವಿವರ | ಪದನಾಮ | ದೂರು ನಿರ್ವಹಿಸಬೇಕಾದ ಇಲಾಖೆಗಳ ವಿವರ |
|---|---|---|---|
| 1 | 2 | 3 | 4 |
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ | ಅಧ್ಯಕ್ಷರು | PWD, NK, DHO, MI & CMC |
| 2 | ಮುಖ್ಯ ಯೋಜನಾ ಅಧಿಕಾರಿಗಳು ಜಿಲ್ಲಾ ಪಂಚಾಯತ | ಉಪಾಧ್ಯಕ್ಷರು | |
| 3 | ಇಇ ಪಂ.ರಾ.ಇಂ. ಗುಣ ನಿಯಂತ್ರಣ ಭರವಸೆ ವಿಭಾಗ | ಸದಸ್ಯರು | |
| 4 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರಿಂದ ನಾಮ ನಿರ್ದೇಶನಗೊಂಡ ತಾಂತ್ರಿಕ ತಜ್ಞರು | ಸದಸ್ಯರು | |
| 5 | ತಾಂತ್ರಿಕ ಸಲಹೆಗಾರರು ಜಿಲ್ಲಾಧಿಕಾರಿಗಳ ಕಾರ್ಯಲಯ (ಕೆ.ಕೆ.ಆರ್.ಡಿ.ಬಿ ಕೋಶ) | ಸದಸ್ಯರು ಕಾರ್ಯದರ್ಶಿಗಳು | |

ಸದರಿ ಸಮಿತಿಯು ದೂರು ಸ್ವೀಕೃತವಾದ ನಂತರ ಸ್ಥಳ ಪರಿಶೀಲನೆ ಕೈಗೊಂಡು ಗುಣ ಭರವಸೆ ಪರೀಕ್ಷೆಗಳ ಇತರೆ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಸಮಗ್ರ ವರದಿಯನ್ನು ಮಂಡಳಿಗೆ ಸಲ್ಲಿಸಲಾಗುತ್ತಿದೆ. ಸದರಿ ವರದಿಯಲ್ಲಿ ಅವ್ಯವಹಾರವಾದ ಬಗ್ಗೆ ದೃಢಪಟ್ಟಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಆದ್ದರಿಂದ ಕಳಪೆ ಕಾಮಗಾರಿಯಾಗದಂತೆ, ಅನುದಾನ ದೂರುಪಯೋಗವಾಗದಂತೆ ಹಾಗೂ ಅನುದಾನವನ್ನು ಪೂರ್ಣವಾಗಿ ಬಳಕೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಂಡಿದೆ ಎಂಬ ಅಂಶವನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರಬಯಸುತ್ತೇನೆ.

ಸಂಖ್ಯೆ: ಪಿಡಿಎಸ್ 204 ಹೆಚ್‌ಕೆಡಿ 2023

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.